ಕ್ರಸಂಖ್ಯೆ: 27 ಕಂಪ್ಯೂಟರ್
ನಿ- 72 14.7ನೇ ಅಧಿವೇಶನ

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಉತ್ತರ

--o--

ವಿಷಯ

ಕೆ.ಐ.ಎ.ಡಿ.ಬಿ. ವತಿಯಿಂದ ಬೆಂಗಳೂರಿನ ವೈಟ್ ಫೀಲ್ಡ್‌ನಲ್ಲಿ ಪಾರ್ಕ್ ನಿರ್ಮಾಣಕ್ಕೆಂದು ನಕ್ಷೆಯಲ್ಲಿ ಮೀಸಲಟ್ಟ ಸ್ಥಳವನ್ನು ಕೆ.ಐ.ಎ.ಡಿ.ಬಿ. ಸಂಸ್ಥೆಯು ಮೆ: ಹರಿವೇದ ಸಂಸ್ಥೆಗೆ ನಿಯಮ ಬಾಹಿರವಾಗಿ ಮಂಜೂರು ಮಾಡಿದ್ದು, ಮೆ: ಹರಿವೇದ ಸಂಸ್ಥೆಗೆ ಸದರಿ ಪ್ರದೇಶದಲ್ಲಿ ನಿವೇಶನ ಮಂಜೂರಾಗಿ ರದ್ದುಪಡಿಸಲಾಗಿದ್ದು, ತದನಂತರ ಇದೇ ಸಂಸ್ಥೆಗೆ ಪಾರ್ಕ್ ಜಾಗವನ್ನು ಮಂಜೂರು ಮಾಡಿ, ನಕ್ಷೆಯಲ್ಲಿ ನಮೂದಾಗಿರುವ ಪಾರ್ಕ್ ಜಾಗವನ್ನು ಮಂಜೂರು ಮಾಡುವಾಗ ಸರ್ಕಾರದ ಅನುಮತಿ ಪಡೆಯದೆ, ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿ, ನಿಯಮ ಬಾಹಿರವಾಗಿ ನಿವೇಶನ ಮಂಜೂರಾತಿ ಮಾಡಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟಾಗಿರುವ ಬಗ್ಗೆ ಹಾಗೂ ಈ ಸಂಬಂಧ ನಿಯಮ ಬಾಹಿರವಾಗಿ ಮಂಜೂರಾತಿ ಮಾಡಿರುವ ಅಧಿಕಾರಿಗಳ ಮೇಲೆ ಇದುವರೆವಿಗೂ ಯಾವುದೇ ರೀತಿಯ ಕಾನೂನು ಕ್ರಮ ಕೈಗೊಳ್ಳದೆ ಇರುವುದರಿಂದ ಉಂಟಾದ ಗಂಭೀರ ಸಮಸ್ಯೆ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

ವಿಷಯ

ಬೆಂಗಳೂರು ಪೂರ್ವ ತಾಲ್ಲೂಕು, ಹೂಡಿ ಗ್ರಾಮದಲ್ಲಿ ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶಕ್ಕಾಗಿ ಒಟ್ಟಾರೆ 554-20 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು, ಅಭಿವೃದ್ಧಿಪಡಿಸಿದ ನಂತರ ಹಂಚಿಕೆಗೆ ಲಭ್ಯವಾದ 459.76 ಎಕರೆ ಪ್ರದೇಶವನ್ನು 122 ವಿವಿಧ ಘಟಕಗಳಿಗೆ ಹಂಚಿಕೆ ಮಾಡಲಾಗಿದೆ.

ಈ ಪ್ರದೇಶದಲ್ಲಿ ಪಾರ್ಕ್ ಉದ್ದೇಶಕ್ಕಾಗಿ 22.47 ಎಕರೆ ಜಮೀನನ್ನು ಮೀಸಲಿಡಲಾಗಿತ್ತು. ಇ.ಪಿ.ಐ.ಪಿ. ಕೈಗಾರಿಕಾ ಪ್ರದೇಶದಲ್ಲಿ ನಿವೇಶನಗಳಿಗೆ ಇರುವ ಬೇಡಿಕೆ ಮತ್ತು ಮಂಡಳಿಯ ಹಣಕಾಸು ಪರಿಸ್ಥಿತಿಯನ್ನು ಮನಗಂಡು ಪಾರ್ಕ್ ಉದ್ದೇಶಕ್ಕಾಗಿ ಮೀಸಲಿಟ್ಟಿರುವ 22.47 ಎಕರೆ ಜಮೀನಿನ ಪೈಕಿ 10.85 ಎಕರೆ ವಿಸ್ತೀರ್ಣವನ್ನು ಕೈಗಾರಿಕಾ ನಿವೇಶನಗಳನ್ನಾಗಿ ಪರಿವರ್ತಿಸಿ, 10 ಘಟಕಗಳಿಗೆ ಕೈಗಾರಿಕಾ ಉದ್ದೇಶಗಳಿಗೆ ಹಂಚಿಕೆ ಮಾಡಲಾಗಿದೆ.

ಉಳಿದ 11.62 ಎಕರೆ ವಿಸ್ತೀರ್ಣದ ಪೈಕಿ 3.95 ಎಕರೆಯನ್ನು 3 ಘಟಕಗಳಿಗೆ ಸಿ.ಎ. ಉದ್ದೇಶಕ್ಕಾಗಿ ಹಂಚಿಕೆ ಮಾಡಲಾಗಿದೆ.

ಉಳಿದ 7.67 ಎಕರೆ ಜಮೀನಿನ ಪೈಕಿ 1.82 ಎಕರೆ ಪ್ರದೇಶವು ನೀರಿನ ಟ್ಯಾಂಕ್ ಪ್ರದೇಶವಾಗಿದ್ದು, 5.85 ಎಕರೆ ಜಮೀನನ್ನು ಸಾರ್ವಜನಿಕ ಸೌಲಭ್ಯಗಳ (ಸಿವಿಕ್ ಅಮೆನಿಟೀಸ್) ಪ್ರದೇಶ ಎಂದು ಕಾಯ್ದಿರಿಸಿ, ರಾಜ್ಯ ಮಟ್ಟದ

ಏಕ ಗವಾಕ್ಷಿ ಸಮಿತಿ ಸಭೆಗಳಲ್ಲಿ ಅನುಮೋದನೆ ನೀಡಿರುವ ಈ ಕೆಳಕಂಡ ಘಟಕಗಳಿಗೆ ಅಂದಿನ ಚಾಲ್ತಿ ಹಂಚಿಕೆ ದರದಂತೆ ಹಂಚಿಕೆ ಮಾಡಲಾಗಿದೆ.

ದಿನಾಂಕ 26.06.2009 ರಂದು ನಡೆದ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಯಲ್ಲಿ ಮೆ: ಹರಿವೇದ ಐಟಿ ಪಾರ್ಕ್ ಪ್ರೈ.ಲಿ. ರವರ ಉದ್ದೇಶಿತ ಷಾಪಿಂಗ್ ಮಾಲ್, ಮಲ್ಟಿಪ್ಲೆಕ್ಸ್, ಐಟಿ/ ಐಟಿಇಎಸ್ ಮತ್ತು ಮಲ್ಟಿ ಲೆವಲ್ ಕಾರ್ ಪಾರ್ಕಿಂಗ್ ಯೋಜನೆಗೆ ಇ.ಪಿ.ಐ.ಪಿ. ಕೈಗಾರಿಕಾ ಪ್ರದೇಶದ ಸಿ.ಎ. ನಿವೇಶನದಲ್ಲಿ ಅಂದಿನ ಚಾಲ್ತಿ ಹಂಚಿಕೆ ದರಕ್ಕೆ ಹೆಚ್ಚುವರಿಯಾಗಿ ಶೇಕಡಾ 10ರಷ್ಟು ಪಾವತಿಸಿಕೊಂಡು ಹಂಚಿಕೆ ಮಾಡುವಂತೆ ನಿರ್ಣಯಿಸಲಾಗಿರುತ್ತದೆ. ದಿನಾಂಕ 13.11.2009ರಂದು ನಡೆದ ಲ್ಯಾಂಡ್ ಆಡಿಟ್ ಕಮಿಟಿ ಸಭೆಯಲ್ಲಿ 3-00 ಎಕರೆ ಜಮೀನು ಲಭ್ಯವಿರುವುದರಿಂದ 5-00 ಎಕರೆ ಬದಲಾಗಿ 3-00 ಎಕರೆ ಜಮೀನನ್ನು ಹಂಚಿಕೆ ಮಾಡಲು ನಿರ್ಣಯಿಸಲಾಗಿದೆ. ಇ.ಪಿ.ಐ.ಪಿ. ಕೈಗಾರಿಕಾ ಪ್ರದೇಶದಲ್ಲಿ 3-00 ಎಕರೆ ಜಮೀನನ್ನು ಮೇಲ್ಕಂಡ ಘಟಕಕ್ಕೆ ಹಂಚಿಕೆ ಮಾಡಲು ದಿನಾಂಕ 25.11.2009 ರಂದು ಸರ್ಕಾರದ ಅನುಮೋದನೆ ನೀಡಲಾಗಿದೆ.

ದಿನಾಂಕ 26.06.2009 ರಂದು ನಡೆದ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಯಲ್ಲಿ ಮೆ॥ ಕಪ್ಪ ಟೆಕ್ನಾಲಜಿ ಇಂಡಿಯಾ ಪ್ರೈ.ಲಿ. ರವರ ಉದ್ದೇಶಿತ ಐ.ಟಿ. ಪಾರ್ಕ್ ಯೋಜನೆಗೆ ಇ.ಪಿ.ಐ.ಪಿ. ಕೈಗಾರಿಕಾ ಪ್ರದೇಶದ ಸಿ.ಎ. ನಿವೇಶನದಲ್ಲಿ 2.85 ಎಕರೆ ಜಮೀನನ್ನು ಹಂಚಿಕೆ ಮಾಡಲು ನಿರ್ಣಯಿಸಲಾಗಿದ್ದು, ಸದರಿ ಘಟಕಕ್ಕೆ ನಿವೇಶನವನ್ನು ಹಂಚಿಕೆ ಮಾಡಿರುವುದಿಲ್ಲ.

ಮೆ॥ ಹರಿವೇದ ಐಟಿ ಪಾರ್ಕ್ ಪ್ರೈ.ಲಿ. ರವರಿಗೆ ಇ.ಪಿ.ಐ.ಪಿ. ಕೈಗಾರಿಕಾ ಪ್ರದೇಶದ ಸಿ.ಎ. ನಿವೇಶನ ಸಂಖ್ಯೆ: 120-ಡಿ ರಲ್ಲಿ 3-00 ಎಕರೆ ಜಮೀನನ್ನು ಪ್ರತಿ ಎಕರೆಗೆ ರೂ.220.00 ಲಕ್ಷಗಳನ್ವಯ ಹಂಚಿಕೆ ಮಾಡಿ, ದಿನಾಂಕ 15.03.2010 ರಂದು ಹಂಚಿಕೆ ಪತ್ರ ನೀಡಲಾಗಿದೆ.

ಯೋಜನಾ ಪ್ರವರ್ತಕರು ದಿನಾಂಕ 10.09.2010 ರ ಒಳಗಾಗಿ ನಿವೇಶನದ ಬಾಕಿ ಹಣವನ್ನು ಪಾವತಿಸಬೇಕಾಗಿದ್ದು, ಪಾವತಿಸಲು ವಿಫಲರಾಗಿದ್ದರ ಮೇರೆಗೆ ಹಂಚಿಕೆಯನ್ನು ದಿನಾಂಕ 28.09.2010 ರಂದು ರದ್ದುಗೊಳಿಸಲಾಗಿದೆ. ಮುಂದುವರೆದು, ಯೋಜನಾ ಪ್ರವರ್ತಕರು ದಿನಾಂಕ 05.04.2011 ರಂದು ನಿಗದಿತ ಬಡ್ಡಿಯೊಂದಿಗೆ ನಿವೇಶನದ ಪೂರ್ಣ ಹಣವನ್ನು ಮಂಡಳಿಗೆ ಪಾವತಿಸಿರುತ್ತಾರೆ. ಅಂದಿನ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು, ಮೆ: ಹರಿವೇದ ಐಟಿ ಪಾರ್ಕ್ ಪ್ರೈ.ಲಿ. ರವರಿಗೆ ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದ ಸಿ.ಎ. ನಿವೇಶನ ಸಂಖ್ಯೆ: 120-ಡಿ ರಲ್ಲಿ 3-00 ಎಕರೆ ಜಮೀನನ್ನು ಹಂಚಿಕೆ ಮಾಡುವಂತೆ ದಿನಾಂಕ 31.12.2012ರಂದು ಆದೇಶಿಸಿರುತ್ತಾರೆ.

ದಿನಾಂಕ: 31.10.2018ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ:-

1. ನಲ್ಲೂರಹಳ್ಳಿ ಗ್ರಾಮದ ಸರ್ವೆ ನಂ: 79ರ 5-00 ಎಕರೆ ಸರ್ಕಾರಿ ಜಮೀನನ್ನು ಕರ್ನಾಟಕ ಭೂಮಂಜೂರಾತಿ ಕಾಯ್ದೆ ಕಲಂ 20(2)ಸಿ ರನ್ವಯ ಕೆ.ಐ.ಎ.ಡಿ.ಬಿ.ಗೆ ಮಂಜೂರು ಮಾಡಿ ವರ್ಗಾಯಿಸುವ ಕುರಿತು ಕೂಡಲೇ ಕ್ರಮ ವಹಿಸಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ಪತ್ರ ಮುಖೇನ, ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರನ್ನು ಕೋರುವುದು:

2. ನಲ್ಲೂರಹಳ್ಳಿ ಗ್ರಾಮದ ಸರ್ವೆ ನಂ: 79ರ 5-00 ಎಕರೆ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರು ಕೆ.ಐ.ಎ.ಡಿ.ಬಿ.ಗೆ ಮಂಜೂರು ಮಾಡಿ ವರ್ಗಾಯಿಸಲು ಕಂದಾಯ ಇಲಾಖೆಗೆ ಶಿಫಾರಸ್ಸು ಮಾಡಿರುವುದರಿಂದ ಹಾಗೂ ಸದರಿ 5-00 ಎಕರೆ ಜಮೀನಿಗೆ ದಿನಾಂಕ: 24.11.1998ರಂದು ಕೆ.ಐ.ಎ.ಡಿ. ಕಾಯ್ದೆ ಕಲಂ 3(1) ಹಾಗೂ 1(3) ರಡಿ ಅಧಿಸೂಚನೆ ಹೊರಡಿಸಿರುವುದರಿಂದ ಈ ಜಮೀನನ್ನು ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶಕ್ಕಾಗಿ ಪಾರ್ಕ್ ಎಂದು ಮೀಸಲಿಡುವುದು:

3. ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದ ಸಂಖ್ಯೆ: 120-ಡಿ ರ 3-00 ಎಕರೆ ಜಮೀನನ್ನು ಸಿ.ಎ. ನಿವೇಶನವನ್ನಾಗಿ ಈಗಾಗಲೇ ಹಂಚಿಕೆ ಮಾಡಲಾಗಿದ್ದು, ಈ ಜಮೀನನ್ನು ಚಾಲ್ತಿಯಲ್ಲಿರುವ ಬಡಾವಣೆ ನಕ್ಷೆಗೆ ಸೂಕ್ತ ಮಾರ್ಪಾಡು ಮಾಡುವ ವಿಷಯವನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮುಂದಿನ ಸಭೆಯಲ್ಲಿ ಮಂಡಿಸುವುದು.

ದಿನಾಂಕ: 17.01.2019 ರಂದು ನಡೆದ ಮಂಡಳಿ ಸಭೆಯಲ್ಲಿ ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದ ಸಿ.ಎ. ನಿವೇಶನ ಸಂಖ್ಯೆ: 120-ಡಿ ರಲ್ಲಿ 3-00 ಎಕರೆ ಜಮೀನನ್ನು ಸಿ.ಎ. ನಿವೇಶನವನ್ನಾಗಿ ಹಾಗೂ ನಲ್ಲೂರಹಳ್ಳಿ ಗ್ರಾಮದ ಸರ್ವೆ ನಂ: 79ರ 5-00 ಎಕರೆ ಸರ್ಕಾರಿ ಜಮೀನನ್ನು ಪಾರ್ಕ್ ಎಂದು ವಿನ್ಯಾಸ ನಕ್ಷೆಯಲ್ಲಿ ಅಳವಡಿಸುವ ಕುರಿತು ವಿವರವಾಗಿ ಚರ್ಚಿಸಿದ ನಂತರ ಈ ಕೆಳಕಂಡಂತೆ ನಿರ್ಣಯಿಸಿದೆ:-

1. ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಿರುವ ನಲ್ಲೂರಹಳ್ಳಿ ಗ್ರಾಮದ ಸರ್ವೆ ನಂ.79ರ 5-00 ಎಕರೆ ಸರ್ಕಾರಿ ಜಮೀನು ಮಂಡಳಿಗೆ ಹಸ್ತಾಂತರಗೊಂಡ ನಂತರ ಈ ಜಮೀನನ್ನು ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದಲ್ಲಿ ಉದ್ಯಾನವನಕ್ಕಾಗಿ (ಪಾರ್ಕ್) ಮೀಸಲಿಡುವುದು;

2. ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದ ವಿನ್ಯಾಸ ನಕ್ಷೆಯಲ್ಲಿ ಈಗಾಗಲೇ ಹಂಚಿಕೆಯಾಗಿರುವ ಸಂ: 120ಡಿ ರಲ್ಲಿನ 3-00 ಎಕರೆ ಜಮೀನನ್ನು ಸಿ.ಎ. ನಿವೇಶನವನ್ನಾಗಿ ಚಾಲ್ತಿಯಲ್ಲಿರುವ ಬಡಾವಣೆ ನಕ್ಷೆಗೆ ಸೂಕ್ತ ಮಾರ್ಪಾಡು ಮಾಡುವುದು;

3. ಮೆ: ಹರಿವೇದ ಐಟಿ ಪಾರ್ಕ್ಸ್ ಪ್ರೈ.ಲಿ.ರವರಿಗೆ ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ 120-ಡಿ ರಲ್ಲಿ 3-00 ಎಕರೆ ಜಮೀನಿನ ಹಂಚಿಕೆಯನ್ನು ರೆಸ್ಟೋರ್ ಮಾಡಿ ಊರ್ಜಿತಗೊಳಿಸುವುದು.

ಮಂಡಳಿ ಸಭೆಯ ನಿರ್ಣಯದಂತೆ ಮೆ॥ ಹರಿವೇದ ಐಟಿ ಪಾರ್ಕ್ಸ್ ಪ್ರೈ.ಲಿ. ರವರಿಗೆ ಬರೆದ ದಿನಾಂಕ 19.02.2019ರ ಪತ್ರದಲ್ಲಿ ನಿವೇಶನದ ಪೂರ್ಣ ಹಣವನ್ನು ಪಾವತಿಸಲು ವಿಳಂಬವಾಗಿರುವ ಅವಧಿಗೆ ಬಡ್ಡಿ ಹಣ ರೂ.41,96,300/-ಗಳನ್ನು ಪಾವತಿಸಿದಲ್ಲಿ ರದ್ದುಗೊಳಿಸಿದ ನಿವೇಶನವನ್ನು ಹಂಚಿಕೆ ಮಾಡಲಾಗುವುದು ಎಂದು ತಿಳಿಸಲಾಗಿದ್ದು, ಕಂಪನಿಯು ದಿನಾಂಕ 20.02.2019ರಂದು ಬಡ್ಡಿ ಹಣವನ್ನು ಮಂಡಳಿಗೆ ಪಾವತಿಸಿದ್ದರ ಮೇರೆಗೆ ನಿವೇಶನವನ್ನು ಹಂಚಿಕೆ ಮಾಡಿ, ದಿನಾಂಕ: 27.02.2019ರಂದು ಸ್ವಾಧೀನವನ್ನು ನೀಡಲಾಗಿದೆ.

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ನಲ್ಲೂರಹಳ್ಳಿ ಗ್ರಾಮದ ಸರ್ವೆ ನಂ: 79ರ 5-00 ಎಕರೆ ಸರ್ಕಾರಿ ಜಮೀನನ್ನು ಕೆ.ಐ.ಎ.ಡಿ.ಬಿ.ಗೆ ಹಸ್ತಾಂತರಿಸುವ ಪ್ರಕ್ರಿಯೆ ಪೂರ್ಣಗೊಂಡಿಲ್ಲದೇ ಇರುವುದರಿಂದ ಮೆ: ಹರಿವೇದ ಐಟಿ ಪಾರ್ಕ್ಸ್ ಪ್ರೈ.ಲಿ. ರವರಿಗೆ ಸಿ.ಎ. ನಿವೇಶನ ಸಂಖ್ಯೆ: 120-ಡಿ ರಲ್ಲಿ ಹಂಚಿಕೆ ಮಾಡಿರುವ 3-00 ಎಕರೆ ಜಮೀನನ್ನು ಸ್ಥಗಿತಗೊಳಿಸಲಾಗಿದೆ ಎಂದು ದಿನಾಂಕ 27.09.2019ರ ಪತ್ರದಲ್ಲಿ ಮೆ: ಹರಿವೇದ ಐಟಿ ಪಾರ್ಕ್ಸ್ ಪ್ರೈ.ಲಿ. ರವರಿಗೆ ತಿಳಿಸಲಾಗಿದೆ.

ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಿರುವ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ನಲ್ಲೂರಹಳ್ಳಿ ಗ್ರಾಮದ ಸರ್ವೆ ನಂ: 79 ರ 5-00 ಎಕರೆ ಸರ್ಕಾರಿ ಜಮೀನಿಗೆ ದಿನಾಂಕ: 24.11.1998ರಂದು ಕೆ.ಐ.ಎ.ಡಿ. ಕಾಯ್ದೆ ಕಲಂ 3(1) ಮತ್ತು 1(3)ರಡಿ ಅಧಿಸೂಚನೆ ಹೊರಡಿಸಿದ್ದು, ಜಿಲ್ಲಾಧಿಕಾರಿಯವರು ಸದರಿ ಜಮೀನನ್ನು ಮಂಡಳಿಗೆ ಹಸ್ತಾಂತರಿಸಲು ಬಾಕಿ ಇರುತ್ತದೆ.

ನಲ್ಲೂರಹಳ್ಳಿ ಗ್ರಾಮದ ಸರ್ವೆ ನಂ: 79ರ 5-00 ಎಕರೆ ಸರ್ಕಾರಿ ಜಮೀನು ಮಂಡಳಿಗೆ ವರ್ಗಾವಣೆಗೊಂಡ ನಂತರ 5-00 ಎಕರೆ ಜಮೀನನ್ನು ಪಾರ್ಕ್.ಗಾಗಿ ಕಾಯ್ದಿರಿಸಲಾಗುತ್ತದೆ. ಈ ಸರ್ಕಾರಿ ಜಮೀನನ್ನು ತುರ್ತಾಗಿ ಕೆ.ಐ.ಎ.ಡಿ.ಬಿ.ಗೆ ಮಂಜೂರು ಮಾಡಿ ಹಸ್ತಾಂತರಿಸುವಂತೆ ಕಂದಾಯ ಇಲಾಖೆಗೆ ಬರೆದ ದಿನಾಂಕ: 13.05.2019, 12.10.2019, 20.06.2020 ಮತ್ತು 20.09.2021ರ ಪತ್ರಗಳಲ್ಲಿ ಕೋರಲಾಗಿದೆ. ಈ ಸರ್ಕಾರಿ ಜಮೀನು ಇದುವರೆವಿಗೂ ಕೆ.ಐ.ಎ.ಡಿ.ಬಿ.ಗೆ ಮಂಜೂರಾತಿಯಾಗಿರುವುದಿಲ್ಲ.

ಸಂಖ್ಯೆ: ಸಿಐ 217 ಐಎಪಿ(ಇ) 2022

(ಡಾ॥ ಮುರುಗೇಶ್ ಆರ್. ನಿರಾಣಿ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು